UASB LIBRARY
Newspaper Clippings
Pg .1 Friday 12-02-2021 Jai Kisan



For more information visit
University Library Website
Web - uasbagrilibindia.org
E-mail- librarian@uasbangalore.edu.in

12-02-2021
Vv Pg 5A

ಕಿರಿಯ ಮಹಿಳಾ ವಿಜ್ಞಾನಿಗೆ ಗೋಷ್ಠಿಯ ನೇತೃತ್ವ | ಹೆಣ್ಣುಮಕ್ಕಳ ವಿಜ್ಞಾನ ದಿನಾಚರಣೆ ಅರ್ಥಪೂರ್ಣ

ಆನ್‌ಲೈನ್ ಗೋಷ್ಠಿಗಳಲ್ಲಿ ಮಾಹಿತಿ ಪಡೆದ ರೈತರು

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಷ್ಟ್ರೀಯ ತೋಟಗಾರಿಕೆ ಮೇಳದಲ್ಲಿ 4ನೇ ದಿನವಾದ ಗುರುವಾರ ತಾಂತ್ರಿಕ ಗೋಷ್ಠಿಗಳು ನಡೆದವು. ಐಐಎಚ್‌ಆರ್‌ನ ಕಿರಿಯ ಮಹಿಳಾ ವಿಜ್ಞಾನಿಯೊಬ್ಬರಿಗೆ ಗೋಷ್ಠಿಯ ನೇತೃತ್ವವನ್ನು ನೀಡುವ ಮೂಲಕ ಅಂತಾರಾಷ್ಟ್ರೀಯ ಮಹಿಳಾ ಮತ್ತು ಹೆಣ್ಣುಮಕ್ಕಳ ವಿಜ್ಞಾನ ದಿನಾಚರಣೆ ಅರ್ಥಪೂರ್ಣವಾಗಿ ನಡೆಸಿತು.

» **ತೋಟಗಾರಿಕಾ ಪದವಿಯತ್ತ ಶೇ.35 ಹೆಣ್ಣು ಮಕ್ಕಳ ಆಸಕ್ತಿ**

ಐಐಎಚ್‌ಆರ್‌ನ ಕಿರಿಯ ಸಂಶೋಧಕಿ (ಹಣ್ಣು ಬೆಳೆ ವಿಭಾಗ) ಡಾ.ಪಿ.ಎಲ್. ಅನುಷ್ಮಾ ಮತಕಾಡಿ, ತೋಟಗಾರಿಕೆ, ಕೃಷಿ, ಹೈನುಗಾರಿಕೆ, ಮೀನುಗಾರಿಕೆ ಮತ್ತು ಇದಕ್ಕೆ ಸಂಬಂಧಿಸಿದ ಉಪ ಉದ್ಯಮದಲ್ಲಿ ಹೆಣ್ಣುಮಕ್ಕಳು ಹಿಂದಿನ ಸಂಖ್ಯೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಹಾಗೆಯೇ ಕೃಷಿ ಮತ್ತು ತೋಟಗಾರಿಕೆಯಲ್ಲಿ ಪದವಿ ಪಡೆಯುತ್ತಿರುವ ಹೆಣ್ಣುಮಕ್ಕಳ ಸಂಖ್ಯೆ ಪ್ರತಿ ರಾಜ್ಯದಲ್ಲಿ ಶೇ.35 ಇದೆ. ಕೇರಳದಲ್ಲಿ ಶೇ. 65ಕ್ಕೂ ಹೆಚ್ಚಿನ ಹೆಣ್ಣುಮಕ್ಕಳು ಕೃಷಿ ಮತ್ತು ತೋಟಗಾರಿಕೆ ವಿಭಾಗದಲ್ಲಿ ಪದವಿ ವ್ಯಾಸಂಗ ನಿರತರಾಗಿದ್ದಾರೆ ಎಂದು ತಿಳಿಸಿದರು.



ಹೆಣ್ಣುಮಕ್ಕಳು ಇತ್ತೀಚಿನ ದಿನಗಳಲ್ಲಿ ತೋಟಗಾರಿಕೆಯನ್ನು ಒಂದು ಉದ್ಯಮವನ್ನಾಗಿ ಸ್ವೀಕರಿಸಿದ್ದಾರೆ. ಸ್ವಸಹಾಯ ಸಂಘಗಳು ಮತ್ತು ಮನೆಯ ವಾತಾವರಣದಲ್ಲಿ ಹೆಣ್ಣುಮಕ್ಕಳಿಗೆ ತೋಟಗಾರಿಕೆ ಮತ್ತು ಕೃಷಿಯಲ್ಲಿ ಅನುಭವ ಸಿಗುವುದರಿಂದ ಅವರು ತೋಟಗಾರಿಕೆ ಮತ್ತು ಕೃಷಿಯಲ್ಲಿ ಪದವಿ ಪಡೆಯಲು ಆಸಕ್ತಿ ತೋರಿಸುತ್ತಿದ್ದಾರೆ ಎಂದರು.

ತಾಂತ್ರಿಕ ಗೋಷ್ಠಿ: ಮೇಘಾಲಯ, ಮಣಿಪುರ, ಮಿಜೋರಾಂ, ನಾಗಾಲ್ಯಾಂಡ್, ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ ಮತ್ತು ಛತ್ತೀಸ್‌ಗಢ ರಾಜ್ಯಗಳ ರೈತರು ಆನ್‌ಲೈನ್‌ನಲ್ಲಿ ನಡೆದ ತಾಂತ್ರಿಕ ಗೋಷ್ಠಿಯಲ್ಲಿ ಭಾಗವಹಿಸಿದ್ದರು. ಮಾವು ಬೆಳೆಗೆ ಸಂಬಂಧಿಸಿದಂತೆ ವಿಜ್ಞಾನಿಗಳಿಂದ ಮಾಹಿತಿ ಪಡೆದರು. ನಾಗಾಲ್ಯಾಂಡ್, ಮಿಜೋರಾಂ, ಮೇಘಾಲಯ ಮತ್ತು ಮಣಿಪುರ ರೈತರಿಗೆ ಬಾಳೆ ಗಿಡ ರೋಗ ತಡಗಟ್ಟುವ ಸಂಬಂಧ ವಿಜ್ಞಾನಿಗಳು ಮಾಹಿತಿ ನೀಡಿದರು.

'ಬಾಳೆಗಿಡವನ್ನು ಕಾಡುವ ರೋಗವನ್ನು ತಡೆಗಟ್ಟುವುದು ಹೇಗೆ' ವಿಷಯವಾಗಿ ರಾಷ್ಟ್ರೀಯ ಸಂಶೋಧನಾ ಕೇಂದ್ರದ ವಿಜ್ಞಾನಿ ಡಾ. ರಾಮಜಯಮ್ಮ ರೈತರಿಗೆ ಈಶಾನ್ಯ ರಾಜ್ಯಗಳ ರೈತರಿಗೆ ಮಾಹಿತಿ ಒದಗಿಸಿದರು. ರೈತರಿಂದ ಮುಂಚಿತವಾಗಿ ಪ್ರಶ್ನೆಗಳನ್ನು ಕರಿಸಿಕೊಳ್ಳಲಾಗಿತ್ತು. ಈ ಎಲ್ಲ ಪ್ರಶ್ನೆಗಳಿಗೆ ಆನ್‌ಲೈನ್‌ನಲ್ಲಿ ಉತ್ತರಿಸಲಾಯಿತು.

ಐಐಎಚ್‌ಆರ್‌ನ ವಿಜ್ಞಾನಿಗಳಾದ ಬಿ. ಬಾಲಕೃಷ್ಣ, ಡಾ. ಆರಿಲ್‌ಕುಮಾರ್ ನಾಯರ್, ಡಾ. ಅಂಜನಿ ಕುಮಾರ್ ಝಾ, ಡಾ. ರಾಜೀವ್ ಕುಮಾರ್ ಗೋಷ್ಠಿ ನಡೆಸಿಕೊಟ್ಟರು.

ತೋಟಗಾರಿಕಾ ಮೇಳಕ್ಕೆ ಇಂದು ತೆರೆ

ಐದು ದಿನಗಳ ರಾಷ್ಟ್ರೀಯ ತೋಟಗಾರಿಕಾ ಮೇಳಕ್ಕೆ ಶುಕ್ರವಾರ (ಫೆ.12) ತೆರೆ ಬೀಳಲಿದೆ. ಈ ಬಾರಿ ಆನ್‌ಲೈನ್ ಮತ್ತು ಆಫ್‌ಲೈನ್ ಎರಡರಲ್ಲೂ ಮೇಳ ನಡೆಯುತ್ತಿದೆ. ಕಳದೆ 4 ದಿನಗಳಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ 50 ಸಾವಿರಕ್ಕೂ ಹೆಚ್ಚು ರೈತರು ಭಾಗವಹಿಸಿದ್ದಾರೆ. ವಿವಿಧ ರಾಜ್ಯದಿಂದ ಕೃಷಿಕರು, ತೋಟಗಾರಿಕಾ ಉತ್ಪನ್ನಗಳ ಉದ್ಯಮಿದಾರರು ಮೇಳಕ್ಕೆ ಖುದ್ದಾಗಿ ಭೇಟಿ ನೀಡಿದ್ದಾರೆ. ಕೇರಳ ಭಾಗದಿಂದ ಹೆಚ್ಚಿನ ಜನರು ಆಗಮಿಸಿದ್ದು ವಿಶೇಷವಾಗಿದೆ.

ಕೀಟಬಾಧೆ ರಕ್ಷಣೆಗೆ ಬೆಳಕು ಸೆಳೆತದ ಬಲೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಬೇರೆಡೆಯಿಂದ ಹಾರಿಬಂದು ಟೊಮ್ಯಾಟೊ ಬೆಳೆಗಳಿಗೆ ಹಾನಿ ಮಾಡುವ ಟ್ಯೂಟ್ ಕೀಟಗಳನ್ನು ಬೆಳಕಿನ ಸಹಾಯದಿಂದ ಸೆಳೆಯುವ 'ಲೈಟ್ ಕಮ್ ಸಕ್ಷನ್ ಟ್ರ್ಯಾಪ್' (ಬೆಳಕು ಸೆಳೆತದ ಬಲೆ) ತಂತ್ರಜ್ಞಾನವನ್ನು ಐಐಎಚ್‌ಆರ್‌ನ ಬೆಳೆ ಸಂರಕ್ಷಣಾ ವಿಭಾಗ ಸಂಶೋಧಿಸಿದೆ.

ಹೆಸರಘಟ್ಟದ ಐಐಎಚ್‌ಆರ್‌ನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ತೋಟಗಾರಿಕಾ ಮೇಳದಲ್ಲಿ ಇದರ ಬಗ್ಗೆ ಪ್ರಾಯೋಗಿಕ ಮಾಹಿತಿ ನೀಡಲಾಗುತ್ತಿದೆ.

ಟೊಮ್ಯಾಟೊ ಬೆಳೆಯಲ್ಲಿ ಬೆಳಕು ಸೆಳೆತದ ಬಲೆ ಆಧಾರಿತ ಟ್ಯೂಟ್ ಕೀಟದ ಸಮಗ್ರ ನಿರ್ವಹಣೆಗೆ ಐಐಎಚ್‌ಆರ್ ಮುಂದಾಗಿದೆ. ನವೆಂಬರ್‌ನಿಂದ ಮಾರ್ಚ್‌ವರೆಗೆ ಸಂಜೆ 6.45 ರಿಂದ ರಾತ್ರಿ 11ರವರೆಗೆ ಈ ಕೀಟಗಳು ಹೆಚ್ಚಾಗಿ ಬರುತ್ತದೆ. ಈ ಕೀಟಗಳಿಂದ ಟೊಮ್ಯಾಟೊದ ಜತೆಗೆ ಬದನೆಕಾಯಿ, ಮೆಣಸಿನ ಕಾಯಿ, ಆಲೂಗಡ್ಡೆ ಮತ್ತಿತರ ಬೆಳೆಗಳಿಗೂ ಹಾನಿಯಾಗುತ್ತದೆ. ಇದರಿಂದ ರೈತರು ನಷ್ಟ ಅನುಭವಿಸಬೇಕಾಗುತ್ತದೆ. ಇದನ್ನು ಮನಗಂದ ಐಐಎಚ್‌ಆರ್‌ನ ವಿಜ್ಞಾನಿಗಳು ಟ್ಯೂಟ್ ಕೀಟದ ನಿರ್ವಹಣೆಗಾಗಿ ಬೆಳಕು ಸೆಳೆತದ ಬಲೆ ಅಭಿವೃದ್ಧಿಪಡಿಸಿದ್ದಾರೆ.





ಟೊಮ್ಯಾಟೊ ಬೆಳೆ ಸಂರಕ್ಷಿಸಲು ಸಹಕಾರಿ

ಬೆಳಕು ಸೆಳೆತದ ಬಲೆ ಯಂತ್ರವನ್ನು ತರಕಾರಿ ಬೆಳೆಯುವ ಗಿಡಗಳ ನಡುವೆ ಆಳವಡಿಸಬೇಕು. ಈ ಯಂತ್ರದಲ್ಲಿ ಉರಿಯುತ್ತಿರುವ ವಿದ್ಯುತ್, ಟ್ಯೂಟ್ ಕೀಟವನ್ನು ತನ್ನತ್ತ ಆಕರ್ಷಿಸುತ್ತದೆ. ಬೆಳೆ ತಿನ್ನಲು ಬರುವ ಕೀಟಗಳು ಬೆಳಕಿನಿಂದ ಆಕರ್ಷಿತವಾಗಿ ಹತ್ತಿರ ಬರುತ್ತಿದ್ದಂತೆ ವಿದ್ಯುತ್ ಜಾಲಿತ ಫ್ಯಾನ್ ತನ್ನ ಬಲೆಗೆ ಬೀಳಿಸುತ್ತದೆ. ಈ ಸಾಧನ ಆಳವಡಿಸುವ ಜತೆಗೆ ತರಕಾರಿ ಬೆಳೆಯ ಸುತ್ತ ಜೋಳ ಮತ್ತು ಇನ್ನಿತರ ಬೆಳೆಗಳನ್ನು ಬೆಳೆದರೆ ಉತ್ತಮ. ಇದರಿಂದ ಕೀಟಗಳು ನೇರವಾಗಿ ಬೆಳಗಳ ಮೇಲೆ ದಾಳಿ ಮಾಡುವುದನ್ನು ತಪ್ಪಿಸಬಹುದು. ಹಗಲಿಗಿಂತ ರಾತ್ರಿ ಹೊತ್ತು ಕೀಟಗಳ ಕಾಟ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಸಂಜೆ ವೇಳೆ ಈ ಸಾಧನ ಕೆಲಸ ಮಾಡುತ್ತದೆ. ಬೆಳೆಗಳನ್ನು ಕೀಟ ಬಾಧೆಯಿಂದ ರಕ್ಷಣೆ ಮಾಡಲು ರೈತರಿಗೆ ಈ ಯಂತ್ರ ಸಹಕಾರಿಯಾಗಿದೆ ಎನ್ನುತ್ತಾರೆ ಇದನ್ನು 08-ಸಂಶೋಧಿಸಿದ ಐಐಎಚ್‌ಆರ್‌ನ ಬೆಳೆ ಸಂರಕ್ಷಣಾ ವಿಭಾಗದ ಪ್ರಧಾನ ವಿಜ್ಞಾನಿ ವಿ. ಶ್ರೀಧರ್.

ನುಗ್ಗೆ ಸೊಪ್ಪಿನ ಮಾತ್ರೆ ಮಾರುಕಟ್ಟೆಗೆ

ನುಗ್ಗೆ ಸೊಪ್ಪಿನಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಾಗಿರುತ್ತದೆ. ಆದರೆ, ಮಾರುಕಟ್ಟೆಯಲ್ಲಿ ಸದಾಕಾಲ ಸಿಗುವುದಿಲ್ಲ. ಸಿಕ್ಕರೂ ಅಂಗಡಿಗೆ ಹೋಗಲು ಸಮಯ ಇಲ್ಲ. ಪ್ರತಿದಿನ ಬಳಕೆ ಮಾಡಲು ಸಾಧ್ಯವಿಲ್ಲ ಎಂಬ ಚಿಂತೆಯೇ? ಇನ್ನುಮುಂದೆ ನುಗ್ಗೆ ಸೊಪ್ಪನ್ನೇ ತಿನ್ನಬೇಕೆಂದು ಇಲ್ಲ. ಎನ್.ಒ.ಎಫ್.ಎಂ ಪ್ರೈವೇಟ್ ಲಿ. ಸಾವಯವ ಕೃಷಿ ಪದ್ಧತಿಯಲ್ಲಿ ನುಗ್ಗೆಸೊಪ್ಪು ಬೆಳೆದು ಅದರ ಎಲೆಯನ್ನು ಸಂಸ್ಕರಿಸಿ ಮಾತ್ರೆ ರೂಪಕ್ಕೆ ತಂದು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇದರ ಸೇವನೆಯಿಂದ ಮಧುಮೇಹ ನಿಯಂತ್ರಣ, ರಕ್ತದೊತ್ತಡ ಕಡಿಮೆ ಮಾಡಲು, ತೂಕ ಇಳಿಸಲು, ಮೊಡವೆ ನಿವಾರಣೆ, ದೈಹಿಕವಾಗಿ ಗಟ್ಟಿಮುಟ್ಟಾಗಲು, ನಿದ್ರಾಹೀನತೆ ಹೋಗಲಾಡಿಸಲು, ಜೀರ್ಣಕ್ರಿಯೆ, ರೋಗನಿರೋಧಕ ಶಕ್ತಿ, ನರಗಳ ದೌರ್ಬಲ್ಯ ಕಡಿಮೆ ಮಾಡಲು ಮತ್ತು ಮಿದುಳಿನ ಆರೋಗ್ಯಕ್ಕೆ ಉತ್ತಮವಾಗಿದೆ.

ರೈತಸ್ನೇಹಿ ಚೆನ್ನ ಕನಕಾಂಬರ



ಕನಕಾಂಬರ ಹೂವಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಸದಾಕಾಲ ಇರುತ್ತದೆ. ಆದರೆ, ಕೀಟಗಳಿಂದ ರಕ್ಷಣೆ ಮಾಡಿ ಬೆಳೆದರೆ ಬಿಡಿಸುವುದು ಕಷ್ಟ. ಇಳುವರಿ ಕೊಡುವುದಿಲ್ಲ ಎಂಬುದು ರೈತರ ಅಳಲು. ಅದಕ್ಕಾಗಿ ಐಐಎಚ್‌ಆರ್ ವಿಜ್ಞಾನಿಗಳು ರೈತ ಸ್ನೇಹಿ ಅರ್ಕ ಚೆನ್ನ ಕನಕಾಂಬರ ತಳಿಯನ್ನು ಅಭಿವೃದ್ಧಿಪಡಿಸಿದ್ದಾರೆ. ಅರ್ಕ ಆಂಬರ, ಅರ್ಕ ಕನಕ, ಅರ್ಕ ಶ್ರೀಯ, ಅರ್ಕ ಶ್ರಾವ್ಯ ತಳಿಗಿಂತ ಹೆಚ್ಚು ಒಂದು ಸುತ್ತು ದೊಡ್ಡದು. ಕೆಸರು, ಕೆಂಪು ಮಿಶ್ರಿತ ಕನಕಾಂಬರ ಇದಾಗಿದೆ. 2 ಅಡಿಗೆ ಒಂದರಂತೆ 1 ಎಕರೆಗೆ 5ರಿಂದ 6 ಸಾವಿರ ಗಿಡಗಳನ್ನು ನಾಟಿ ಮಾಡಬೇಕು. ಸಾಲಿನಿಂದ ಸಾಲಿಗೆ 3 ರಿಂದ 4 ಅಡಿ ಅಂತರ ಇರಬೇಕು. 2 ಸಾವಿರ ಗಿಡಕ್ಕೆ 28 ರಿಂದ 30 ಕೆಜಿ ಇಳುವರಿ ಸಿಗಲಿದೆ. ಇದು ಬೇರೆ ತಳಿಗಿಂತ ಹೆಚ್ಚು ಇಳುವರಿ ಕೊಡಲಿದೆ. ತುಸು ದಪ್ಪ ಹೂವು, ಬಲಿಷ್ಠ ಕಾಂಡ, ಸೊರಗು ರೋಗ ನಿರೋಧಕ, ಗಿಡದಿಂದ ಹೂ ಕೊಯ್ದ ನಂತರ 4 ದಿನ ತಾಜಾ ಇರುತ್ತದೆ. ಎಲ್ಲ ಬಗೆಯ ಮಣ್ಣಿನಲ್ಲಿ ಬೆಳೆಯಬಹುದು ಎಂದು ಪ್ರಧಾನ ವಿಜ್ಞಾನಿ ಡಾ.ಸಿ. ಅಶ್ವತ್ಥ ಮಾಹಿತಿ ನೀಡಿದ್ದಾರೆ.

ಪರ್ಪಲ್ ಬಾಂಗ್ ಬ್ರಿಂಜಾಲ್-2



ವರ್ಷದ ಎಲ್ಲ ಋತುಮಾನದಲ್ಲೂ ಬೆಳೆಯಲು ಯೋಗ್ಯವಾದ ಪರ್ಪಲ್ ಬಾಂಗ್ ಬ್ರಿಂಜಾಲ್-2 ತಳಿಯ ದೊಡ್ಡ ಗಾತ್ರದ ಬದನೆಗಳನ್ನು ಐಐಎಚ್‌ಆರ್ ವಿಜ್ಞಾನಿಗಳು ಅಭಿವೃದ್ಧಿಪಡಿಸಿದ್ದು, ತೋಟಗಾರಿಕಾ ಮೇಳದಲ್ಲಿ ಇವುಗಳು ಮೇಳೈಸಿವೆ. ಇದು ಉತ್ತಮವಾದ ತಳಿಯಾಗಿದ್ದು, ದೊಡ್ಡ -ದೊಡ್ಡ ಮಾಲ್‌ಗಳು, ಸಮಾರಂಭಗಳಿಗೆ ಬಳಸಲು ಇದು ಸೂಕ್ತವಾಗಿದೆ. ಒಂದೊಂದು ಬದನೆಕಾಯಿ 400ರಿಂದ 500 ಗ್ರಾಂ ತೂಕವಿದ್ದು, ಎಕರೆಗೆ 20 ಟನ್ ತೆಗೆಯಬಹುದು ತಳಿ ಸಂಶೋಧಕ ಡಾ. ಟಿ.ಎಚ್. ಸಿಂಗ್ ತಿಳಿಸಿದ್ದಾರೆ.

ಬೀಜೋತ್ಪಾದನೆ ಮಾಡಿ ಲಾಭ ಗಳಿಸಿ

ಶೂನ್ಯ ಬಂಡವಾಳದಲ್ಲಿ ರೈತರು ಲಾಭ ಗಳಿಸುವ ಯೋಜನೆಗೆ ಐಐಎಚ್‌ಆರ್ ತಳಪಾಯ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಶೂನ್ಯ ಬಂಡವಾಳದಲ್ಲಿ ರೈತರು ಬೀಜೋತ್ಪಾದನೆ ಮಾಡಿ ಆರ್ಥಿಕವಾಗಿ ಲಾಭ ಗಳಿಸುವ ಯೋಜನೆಯನ್ನು ಭಾರತೀಯ ಸಂಶೋಧನಾ ಸಂಸ್ಥೆ (ಐಐಎಚ್‌ಆರ್) ಆರಂಭಿಸಿದೆ.

'ರೈತರ ಹೊಲಗಳಲ್ಲಿ ಬೀಜೋತ್ಪಾದನೆ' ಎಂಬ ಯೋಜನೆ ಅಡಿ ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ, ಚಿತ್ರದುರ್ಗ, ರಾಣಿಬೆನ್ನೂರು, ಹಾವೇರಿ, ಶಿವಮೊಗ್ಗ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಬತ್ತನೆ ಬೀಜ ಖರೀದಿಸುವ ಸಂಬಂಧ ರೈತರೊಂದಿಗೆ ಐಐಎಚ್‌ಆರ್ ಒಪ್ಪಂದ ಮಾಡಿಕೊಂಡಿದೆ.

ರೈತರಿಗೆ ಉಚಿತವಾಗಿ ಬೀಜಗಳ ಮಾದರಿ ನೀಡುತ್ತಿದೆ. ರೈತರು ಪ್ರತಿ ವರ್ಷ ಉತ್ಪಾದಿಸಿದ ಸುಮಾರು 50 ಟನ್‌ಗೂ ಅಧಿಕ ಬತ್ತನೆ ಬೀಜವನ್ನು ಖರೀದಿಸಿ, ದೇಶದ ಇತರೆ ಭಾಗಗಳಲ್ಲಿನ ರೈತರಿಗೆ ಮಾರಾಟ ಮಾಡುತ್ತಿದೆ. ಇದರಿಂದ ರೈತರು ಬಂಡವಾಳ ಹೂಡದೇ ಲಕ್ಷಾಂತರ ಹಣ ಗಳಿಸಲು ಅನುಕೂಲವಾಗಿದೆ.

'ಕನ್ನಡಪ್ರಭ' ಜತೆಗೆ ಮಾತನಾಡಿದ ಸಂಸ್ಥೆಯ ಬೀಜೋತ್ಪಾದನೆ ವಿಭಾಗದ ಮುಖ್ಯ ತಾಂತ್ರಿಕ ಅಧಿಕಾರಿ ಡಾ.ಎಸ್. ನಾಗೇಗೌಡ, ಬೀಜೋತ್ಪಾದನೆಗೆ ಸಂಬಂಧಿಸಿದಂತೆ ರೈತರಿಗೆ ಒಂದು ವಾರ ತರಬೇತಿ ನೀಡಲಾಗುತ್ತದೆ. ಬೀಜದ ಮಾದರಿ ಪಡೆದ ರೈತರ ಹೊಲಗದ್ದೆಗಳಿಗೆ ಸಂಸ್ಥೆಯ ವಿಜ್ಞಾನಿಗಳು ಕಾಲ ಕಾಲಕ್ಕೆ ಭೇಟಿ ನೀಡಿ ಪರಿಶೀಲಿಸಿ ಆಗತ್ಯ ಸಲಹೆ-ಸೂಚನೆ ನೀಡುತ್ತಾರೆ. ಈ ಯೋಜನೆಯಿಂದ ರೈತರಿಗೆ ಆರ್ಥಿಕವಾಗಿ ಸಾಕಷ್ಟು ಲಾಭ ಆಗಲಿದೆ. ಜತೆಗೆ, ರೈತರು ಖಾಸಗಿ ಕಂಪನಿಗಳಿಂದ ಕಳಪೆ ಬೀಜ ಖರೀದಿಸಿ ನಷ್ಟಕ್ಕೆ ಒಳಗಾಗುವುದು ಸಹ ತಪ್ಪಲಿದೆ ಎಂದರು.



ನೈಸರ್ಗಿಕ ಜೇನಿನ ಪರಾಗ

ರಾಷ್ಟ್ರೀಯ ತೋಟಗಾರಿಕಾ ಮೇಳದಲ್ಲಿ ಇದೇ ಮೊದಲ ಬಾರಿಗೆ ನೈಸರ್ಗಿಕ ಜೇನು ತುಪ್ಪದ ಜೊತೆಗೆ ಆಕ್ಕಂತ ಆಪರೂಪ ನೈಸರ್ಗಿಕ 'ಜೇನಿನ ಪರಾಗ' ಸಹ ಲಭ್ಯವಿದೆ. ಉತ್ತರ ಕನ್ನಡದ ಮಧುಕೇಶ್ವರ ಜೆ. ಜೆನೆಡೆ ಅವರ 'ಮಧು ಬೀ ನರ್ಸರಿ' ಮೇಳಗೆಯಲ್ಲಿ ಜೇನಿನ ಪರಾಗವನ್ನು ಪ್ರದರ್ಶನ ಮತ್ತು ಮಾರಾಟಕ್ಕಿಡಲಾಗಿದೆ. ಹೇರಳ ಪೋಷಕಾಂಶಗಳಿರುವ ಪರಾಗದ (ಗೋಧಿ ಬಣ್ಣದ ಪುಟಾಣಿ ಕಾಳುಗಳ ಮಾದರಿ) ಬಗ್ಗೆ ಬಹುತೇಕರು ತುಂಬಾ ಆಸಕ್ತಿಯಿಂದ ಮಾಹಿತಿ ಪಡೆಯುತ್ತಿದ್ದ ದೃಶ್ಯ ವಿಶೇಷವಾಗಿ ಕಂಡುಬಂತು.

ನಿನ್ನೆ 10000 ಮಂದಿ ಭೇಟಿ

ರಾಷ್ಟ್ರೀಯ ತೋಟಗಾರಿಕಾ ಮೇಳದ ಐದನೇ ದಿನವಾದ ಗುರುವಾದ 10 ಸಾವಿರಕ್ಕೂ ಹೆಚ್ಚು ಜನ ಭೇಟಿ ನೀಡಿ ಮಾಹಿತಿ ಪಡೆದರು. ಮೇಳದಲ್ಲಿದ್ದ 125 ಮಳಿಗೆಗಳಲ್ಲದ್ದವು. ವಿವಿಧ ಜಿಲ್ಲೆಗಳಿಂದ ಬಂದಿದ್ದ ರೈತರು ನಾನಾ ಜಾತಿಯ ಬತ್ತನೆ ಬೀಜ, ರಸಗೊಬ್ಬರ, ಹೂವಿನ ಗಿಡ ಮತ್ತು ಹಣ್ಣಿನ ಗಿಡಗಳನ್ನು ಮುಗಿಬಿದ್ದು ಖರೀದಿಸಿದರು. ಕೃಷಿ, ಆಹಾರ ಉತ್ಪನ್ನಗಳ ಮಾರಾಟ, ತೋಟಗಾರಿಕೆಗೆ ಸಂಬಂಧಿಸಿದ ಉಪಕರಣಗಳು, ಯಂತ್ರೋಪಕರಣ, ಪಾಲಿಹೌಸ್‌ಗಳ ಪರಿಕರಗಳು ವ್ಯಾಪಾರ ಜೋರಾಗಿತ್ತು.

12-02-2021
Kp Pg 04

"Happiness is not the absence of problems, it's the ability to deal with them"

UASB
LIBRARY
Newspaper Clippings
Pg .2 Friday 12-02-2021 Jai Kisan



ರಾಜ್ಯದಲ್ಲೂ ಸಾವಯವ ಕೃಷಿ ವಿವಿ ಸ್ಥಾಪನೆ ಚಿಂತನೆ

ಬೆಂಗಳೂರು: ಗುಜರಾತ್ ಹಾಗೂ ಛತ್ತೀಸ್‌ಗಢ ರಾಜ್ಯಗಳ ಮಾದರಿಯಲ್ಲಿ ರಾಜ್ಯದಲ್ಲಿಯೂ ಸಾವಯವ ಕೃಷಿ ವಿಶ್ವವಿದ್ಯಾಲಯದ ಕುರಿತು ಕೃಷಿ ಸಚಿವ ಬಿ.ಸಿ. ಪಾಟೀಲ್ ಚಿಂತನೆ ನಡೆಸಿದ್ದಾರೆ.



ಗುರುವಾರ ವಿಕಾಸಸೌಧದ ಕಚೇರಿಯಲ್ಲಿ ಸಾವಯವ ಕೃಷಿ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಸಚಿವರು, ಆರೋಗ್ಯದ ದೃಷ್ಟಿಯಿಂದ ಸಾವಯವದತ್ತ ಜನರು ಆಕರ್ಷಿತರಾಗಿದ್ದಾರೆ. ಹೀಗಾಗಿ ಸಾವಯವ ಕೃಷಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಬೇಕು. ಈ ನಿಟ್ಟಿನಲ್ಲಿ ಶಿವಮೊಗ್ಗದಲ್ಲಿ ಸಾವಯವ ಕೃಷಿ ಸ್ಥಾಪಿಸುವ ಬಗ್ಗೆ ಸಾವಯವ ಸಮಿತಿ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದ್ದು, ಈ ಕುರಿತು ಚಿಂತನೆ ನಡೆಸಿ ಮುಂದಿನ ಕ್ರಮ ಕೈಗೊಳ್ಳುವುದಾಗಿ ಹೇಳಿದರು.

ಕೃಷಿ ಭೂಮಿಗೆ ಹೆಚ್ಚಿನ ರಾಸಾಯನಿಕಗಳನ್ನು ಬಳಸುವುದರಿಂದ ಆರೋಗ್ಯಕರ ಉತ್ಪನ್ನಗಳನ್ನು ಪಡೆಯಲು ಸಾಧ್ಯವಿಲ್ಲ, ರಾಸಾಯನಿಕ ಬಳಕೆ ಹೆಚ್ಚಿದಷ್ಟು ಭೂಮಿಯ ಪೋಷಕಾಂಶ ಕುಗ್ಗುವುದರ ಜನರ ಆರೋಗ್ಯದ ಮೇಲೂ ಸಹ ದುಷ್ಪರಿಣಾಮ ಬೀರುವುದು ಹೆಚ್ಚಾಗಿದೆ ಎಂದು ಸಚಿವರು ಹೇಳಿದರು.

ಒಂದು ಜಿಲ್ಲೆ ಒಂದು ಉತ್ಪನ್ನದಡಿ ಸಿರಿಧಾನ್ಯ ಹಾಗೂ ಸಾವಯವ ಪದಾರ್ಥಗಳ ಸಂಸ್ಕರಣೆ ಮಾರುಕಟ್ಟೆ ವಿಸ್ತರಣೆಗೆ ಹೆಚ್ಚು ಒತ್ತು ನೀಡಬೇಕು. ಸ್ಥಳೀಯ ಧಾನ್ಯಗಳನ್ನು ಸಾವಯವ ಪಟ್ಟಿಗೆ ಸೇರಿಸುವ ಬಗ್ಗೆ ಚಿಂತನೆ ನಡೆಸಲಾಗುವುದು ಎಂದ ಬಿ.ಸಿ.ಪಾಟೀಲ್, ರೈತರಿಗೊಂದು ಒಂದು ಕಾರ್ಯಕ್ರಮದಲ್ಲಿ ಸಾವಯವ ಕೃಷಿಕರ ಭಾಗವಹಿಸುವಿಕೆ ಹೆಚ್ಚಿಸಲು ಅಧಿಕಾರಿಗಳಿಗೆ ಸೂಚಿದರು.

ಸಾವಯವ ಕೃಷಿಗಾಗಿ ಸಂಪನ್ಮೂಲ ವ್ಯಕ್ತಿಗಳನ್ನು ಹೆಚ್ಚಿಸಬೇಕು. ಮಾದರಿ ಸಂಪನ್ಮೂಲ ವ್ಯಕ್ತಿಗಳು ಕೃಷಿಕರಿಗೆ ಸಾವಯವ ಕುರಿತು ಇನ್ನಷ್ಟು ಮಾಹಿತಿ ನೀಡಬೇಕು. ಸಾವಯವ ಗೊಬ್ಬರವನ್ನು ಸರಕಾರದ ಸಂಸ್ಥೆಗಳೇ ಪ್ರಮಾಣೀಕರಿಸುವಂತಾಗಬೇಕು. ಗುಣಮಟ್ಟದ ಪ್ರಮಾಣೀಕೃತ ಸಾವಯವ ಗೊಬ್ಬರ ತಯಾರಿಕೆ ಸೇರಿದಂತೆ ಮತ್ತಿತ್ತರ ವಿಚಾರಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಸಭೆಯಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ರಾಜಕುಮಾರ್ ಖತ್ರಿ, ಸಾವಯವ ಕೃಷಿ ಉನ್ನತ ಮಟ್ಟದ ಅಧಿಕಾರಯುಕ್ತ ಸಮಿತಿ ಅಧ್ಯಕ್ಷ ಆನಂದ್ ಉಪಲ್ಕಿ, ಕೃಷಿ ನಿರ್ದೇಶಕ ಶ್ರೀನಿವಾಸ್, ಕೆವೆಕ್ ವ್ಯವಸ್ಥಾಪಕ ನಿರ್ದೇಶಕ ಶಿವರಾಜ್ ಸೇರಿದಂತೆ ಸಮಿತಿ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

12-02-2021 Vk Pg 02



ಹಾವೇರಿ ಜಿಲ್ಲೆಯ ಬ್ಯಾಡಗಿ ಎಂದೊಡನೆ ಎಲ್ಲರಿಗೂ ಥಟ್ಟನೆ ನೆನಪಾಗುವುದು ಕೆಂಪು ಬಣ್ಣದ ಒಣ ಮೆಣಸಿನಕಾಯಿ. ವಿದೇಶಗಳಿಗೂ ರಫ್ತು ಆಗುವ ಈ ಬ್ಯಾಡಗಿ ಮೆಣಸಿನಕಾಯಿಯಲ್ಲೇ 'ಲಿಪ್‌ಸ್ಟಿಕ್ ಸುಂದರಿ' ಆಡಗಿದ್ದಾಳೆ ಎಂಬುದು ಬಹುತೇಕರಿಗೆ ತಿಳಿದಿಲ್ಲ. ವಿಶ್ವವಿಖ್ಯಾತಿಯ ಈ ಮಸಾಲೆ ಕಿಂಗ್‌ಗೆ ಪ್ರಸಕ್ತ ಸಾಲಿನಲ್ಲಿ ಚೆನ್ನಕ್ಕೂ ಮೀರಿದ ದರ ದೊರೆತು 'ಕೆಂಪು ಬಂಗಾರ'ವಾಗುವ ದಾಖಲೆ ಬರೆದಿದೆ. ಇದರ ಸ್ಟೂಲ ನೋಟ ಇಲ್ಲಿದೆ..

ಕೆಂಪು ಬಂಗಾರ

ಬ್ಯಾಡಗಿ ಮೆಣಸು

ಕೋಟ್ಯಂತರ ರೂ. ವಹಿವಾಟು

ಬ್ಯಾಡಗಿ ಎಪಿಎಂಸಿಯಲ್ಲಿ ಮೆಣಸಿನ ವಹಿವಾಟೇ ಪ್ರಧಾನ. ಇದೊಂದರಲ್ಲೇ ವರ್ಷಕ್ಕೆ 800ರಿಂದ 1000 ಕೋಟಿ ರೂ. ವ್ಯವಹಾರ ನಡೆಯುತ್ತಿದೆ. ಜತೆಗೆ ಚಿಕ್ಕಬಾಸೂರ, ಮೋಟೆಬೆನ್ನೂರ, ಚಿಕ್ಕಣಜಿಯಲ್ಲಿ ಉಪ ಮಾರುಕಟ್ಟೆಯಿದ್ದು ಮೆಣಸೇ ಮಹಾರಾಜ. ಬ್ಯಾಡಗಿಗೆ ಬಳ್ಳಾರಿ ಬಲ್ಲೆಹಾಗೂ ಆಂಧ್ರಪ್ರದೇಶದಿಂದಲೂ ಬರುತ್ತದೆ.

ಏಕೆ ಇಷ್ಟು ಮಹತ್ವ?

ಮೆಣಸಿನಕಾಯಿಯಲ್ಲಿ 'ಒಲಿಯೊರೆಸಿನ್' ಎಂಬ ನೈಸರ್ಗಿಕ ಬಣ್ಣದ ಅಂಶಗಳಿವೆ. ಸೌಂದರ್ಯವರ್ಧಕ ಲಿಪ್‌ಸ್ಟಿಕ್, ನೇಲ್ ಪಾಲಿಷ್ ತಯಾರಿಕೆಯಲ್ಲಿ ಒಲಿಯೊರೆಸಿನ್ ಮಹತ್ವದ್ದಾಗಿದೆ. ಈ ಕಾರಣಕ್ಕಾಗಿ 20 ವರ್ಷಗಳಿಂದ ದ.ಆಫ್ರಿಕಾ, ಚೀನಾ, ಆಮೆರಿಕ ಸೇರಿ ಹಲವು ದೇಶಗಳಿಗೆ ರಫ್ತಾಗುತ್ತಿದೆ. ಶೇ. 70ರಷ್ಟು ಮೆಣಸು ಈ ಉದ್ಯಮಕ್ಕೇ ಹೋಗುತ್ತದೆ!

ಬ್ಯಾಡಗಿ ಸಾಮ್ರಾಜ್ಯ ವಿಸ್ತರಣೆ

ಬ್ಯಾಡಗಿ ಮೆಣಸಿನಕಾಯಿಯ ಮೂಲ ತಳಿ ಕಡ್ಡಿ ಮೆಣಸಿನಕಾಯಿ ಇದ್ದಿದ್ದು ಶಿವಮೊಗ್ಗ ಜಿಲ್ಲೆಯಲ್ಲಿ. ಆದು ಮೊದಲು ಮಿಶ್ರ ಬೆಳೆಯಾಗಿತ್ತು. ನಂತರ ವಾಣಿಜ್ಯ ಬೆಳೆಯಾಗಿ ಮಳೆಯಾಶ್ರಿತ ಧಾರವಾಡಕ್ಕೆ ಕಾಲಿಟ್ಟಿತ್ತು. ಮುಂದೆ ಬಳ್ಳಾರಿ, ರಾಯಚೂರು, ಕಲಬುರಗಿ ಸೇರಿದಂತೆ ದೇಶಾದ್ಯಂತ 3 ಲಕ್ಷ ಹೆಕ್ಟೇರ್‌ಗೂ ಹೆಚ್ಚಿನ ಪ್ರದೇಶದಲ್ಲಿ ವ್ಯಾಪಿಸಿತು. ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶದಲ್ಲೂ ಬ್ಯಾಡಗಿ ಘಮ ಇದೆ.

ಡಬ್ಬಿ ಮತ್ತು ಕಡ್ಡಿ ಮೆಣಸು

ಬ್ಯಾಡಗಿ ಮೆಣಸಿನಲ್ಲಿ ಎರಡು ವಿಧ, ಡಬ್ಬಿ ಮತ್ತು ಕಡ್ಡಿ. ಡಬ್ಬಿ ಎಂದರೆ ಸಣ್ಣಕ್ಕೆ ಮತ್ತು ಗುಂಡಗೆ ಇರುತ್ತದೆ. ಆದರ ಬಣ್ಣ ಘಮ ಮತ್ತು ರುಚಿಯೇ ಜನಪ್ರಿಯ. ಇದರಲ್ಲಿ ಬೀಜ ಜಾಸ್ತಿಯಾದರೂ ಕಡ್ಡಿ ವೆಡ್ಡೆಟಗಿಂತ ಖಾರ ಕಡಿಮೆ. ಕಡ್ಡಿ ಮೆಣಸು ಸಪೂರಕ್ಕೆ ಉದ್ದಕ್ಕೆ ಇರುತ್ತದೆ. ಇದರಲ್ಲಿ ಬೀಜ ಕಡಿಮೆ, ಖಾರ ಜಾಸ್ತಿ.

ಮಾಹಿತಿ: **ಗಣೇಶ ಆರ್ಕಾಚಾರಿ ಬ್ಯಾಡಗಿ**

ಜಿಐ ಮಾನ್ಯತೆ
ಫೆಬ್ರವರಿ, 2011ರಲ್ಲಿ ಜಿಯೋಗ್ರಾಫಿಕಲ್ ಇಂಡಿಕೇಟರ್ ಸಿಕ್ಕಿದ್ದರಿಂದ ಬ್ಯಾಡಗಿ ಮೆಣಸು ಇನ್ನಷ್ಟು ಪ್ರಸಿದ್ಧಿಯಾಯಿತು.

ಹಲವು ಉದ್ಯಮಗಳ ಮಾಲೆ

- ಮೆಣಸಿನಿಂದ ಒಲಿಯೊರೆಸಿನ್ ಬೇರ್ಪಡಿಸುವುದು, ಉತ್ಪನ್ನದ ಗುಣಮಟ್ಟವನ್ನು ದೀರ್ಘಕಾಲ ರಕ್ಷಿಸುವುದು ದೊಡ್ಡ ಉದ್ಯಮ.
- ದೀರ್ಘ ಕಾಲ ಕಾಪಾಡುವುದಕ್ಕೆ ಖಾಸಗಿ ಒಡೆತನದ 25 ಕೋಲ್ಡ್ ಸ್ಟೋರೇಜ್‌ಗಳು ಬ್ಯಾಡಗಿಯಲ್ಲಿಯೇ ಇವೆ.
- ತಡಸ ಗ್ರಾಮದಲ್ಲಿ ಮೆಣಸಿನಕಾಯಿ ತೊಗಟೆ ಬಿಡಿಸಿ ಎಣ್ಣೆ ಬೇರ್ಪಡಿಸುವ ಸಂಸ್ಕರಣಾ ಘಟಕಗಳಿವೆ.
- ಆಹಾರ ಪದಾರ್ಥಗಳಲ್ಲಿ ಬಳಕೆಗೆ ಖಾರದ ಪುಡಿ, ನಾನಾ ಮಸಾಲೆ ಪುಡಿಗಳ ತಯಾರಿಸಲಾಗುತ್ತದೆ. ಬ್ಯಾಡಗಿ ಪಟ್ಟಣದಲ್ಲೇ 34 ಮಿಲ್‌ಗಳಿವೆ.
- ಎಂಡಿಎಚ್ ಮಸಾಲೆ ಮಾಲೀಕ ಧರ್ಮಪಾಲ್ ಗುಲಾಟಿ ನಿಧನರಾದಾಗ ಬ್ಯಾಡಗಿ ಮೆಣಸಿನಕಾಯಿ ನಂಟು ಇನ್ನಷ್ಟು ಪ್ರಚಾರ ಪಡೆದಿತ್ತು.

ಮೆಣಸಿನ ದರ ಬೆಳೆದ ಬಗೆ

- 2020ರ ಡಿ. 14 ರಂದು 35,555 ರೂ., ಡಿ. 17ರಂದು 36.999 ರೂ. ವರೆಗೆ ಮೆಣಸು ಮಾರಾಟವಾಗಿತ್ತು.
- ಡಿ. 22ರಂದು ರೋಣ ತಾಲೂಕಿನ ನವಡಿ ಗ್ರಾಮದ ರೈತ ಬಸವರೆಡ್ಡಿಪ್ಪ ಬೂಸರೆಡ್ಡಿ ಬೆಳೆದ ಮೆಣಸಿನಕಾಯಿಗೆ 45,111 ರೂ.ದರ ಸಿಕ್ಕಿತ್ತು.
- ಗದಗ ಜಿಲ್ಲೆ ಬೆಟಗೇರಿ ಗ್ರಾಮದ ಮಲ್ಲಿಕಾರ್ಜುನ ಕರಿಮಿಷ್ಠಿ ಅವರಿಗೆ ಕ್ವಿಂಟಾಲ್‌ಗೆ 50,111 ರೂ.ದರ ಸಿಕ್ಕಿತು.
- ಮುಂದೆ ಹಾವೇರಿ ಜಿಲ್ಲೆಯ ತಿಗ್ಗಾಯಿ ಚನ್ನಬಸವೇಶ್ವರ ಬ್ಯಾಳೆ ಗೌಡ್ರ ಬೆಳೆಗೆ 55,239 ರೂ. ದೊರಕಿತು.
- ಗದಗ ಜಿಲ್ಲೆ ಬೆಟಗೇರಿ ಗ್ರಾಮದ ಮಲ್ಲಿಕಾರ್ಜುನ ಕರಿಮಿಷ್ಠಿ ಅವರು 76,109 ರೂ.ಗೆ ಮಾರಿದ್ದು ಇದುವರೆಗಿನ ದಾಖಲೆ.

12-02-2021 Vk Pg 09

ದ್ರಾಕ್ಷಿ ಬೆಳೆಯಿಂದ ಅನ್ಯ ರಾಜ್ಯಕ್ಕೆ ಲಾಭ | ಸ್ಥಳೀಯ ಮಾರುಕಟ್ಟೆಗೆ ಬೆಳೆಗಾರರ ಒತ್ತಾಯ

ಅಥಣಿ ದ್ರಾಕ್ಷಿ ಮಹಾರಾಷ್ಟ್ರಕ್ಕೆ ಸಿಹಿ

■ **ಮಹೇಶ್ ವಿಜಾಪುರ** ಬೆಳಗಾವಿ
mahesh.vijapur@timesgroup.com

ಗಡಿ ವಿಷಯದಲ್ಲಿ ಕರ್ನಾಟಕದ ವಿರುದ್ಧ ಕತ್ತಿ ಮಸೆಯುವ ಮಹಾರಾಷ್ಟ್ರಕ್ಕೆ ಕರ್ನಾಟಕದ ಗಡಿ ಭಾಗದ ಬೆಳೆಗಳ ಮೂಲಕವೇ ಕೋಟ್ಯಂತರ ರೂ. ಆದಾಯ ಹರಿದು ಹೋಗುತ್ತಿದೆ. 'ಉತ್ತನ್ನ ಕರ್ನಾಟಕದ್ದಾದರೂ ಆದಾಯ ಮಾತ್ರ ಮಹಾರಾಷ್ಟ್ರದ್ದು' ಎನ್ನುವ ಪರಿಸ್ಥಿತಿ ನಿರ್ಮಾಣಗೊಂಡಿದೆ.

ರಾಜ್ಯದಲ್ಲಿ ಅತಿ ಹೆಚ್ಚು ದ್ರಾಕ್ಷಿ ಬೆಳೆಯುವ ಅಥಣಿ ತಾಲೂಕು ಸ್ವಂತೀಯವಾಗಿ ಮಾರುಕಟ್ಟೆ ಮೂಲ ಸೌಕರ್ಯ ಹೊಂದಿಲ್ಲ. ಹೀಗಾಗಿ ಆಲ್ಲಿನ ದ್ರಾಕ್ಷಿ ಖರೀದಿದಾರರು ಕರ್ನಾಟಕದ ದ್ರಾಕ್ಷಿಗೆ ಮಹಾರಾಷ್ಟ್ರದ ಲೇಬಲ್ ಅಂಟಿಸಿ ದೇಶ-ವಿದೇಶಗಳಿಗೂ ರಫ್ತು ಮಾಡಿ ದುಪ್ಪಟ್ಟು ಆದಾಯ ಗಳಿಸುತ್ತಿದ್ದಾರೆ. ಸ್ಥಳೀಯ ಮಾರುಕಟ್ಟೆ ಕೊರತೆ ರಾಜ್ಯದ ರೈತರು ಮಹಾರಾಷ್ಟ್ರವನ್ನೇ ಅವಲಂಬಿಸುವ ಅನಿವಾರ್ಯತೆ ಸೃಷ್ಟಿಸಿದೆ.

ರಾಜ್ಯದಲ್ಲಿ ಬಾಗಲಕೋಟೆ, ವಿಜಯಪುರ ಮತ್ತು ಬೆಳಗಾವಿ ಆತಿ ಹೆಚ್ಚು ದ್ರಾಕ್ಷಿ ಬೆಳೆಯುವ ಪ್ರದೇಶಗಳು. ಅಥಣಿ ತಾಲೂಕಿನೊಂದರಲ್ಲಿಯೇ 1200 ಎಕರೆ ಪ್ರದೇಶದ ದ್ರಾಕ್ಷಿ ಬೆಳೆಯಿಂದ ಪ್ರತಿ ವರ್ಷ 600 ಕೋಟಿ ರೂ.ಗೂ ಅಧಿಕ ಮೊತ್ತದ ವಹಿವಾಟು ನಡೆಯುತ್ತದೆ. ಅಥಣಿ ತಾಲೂಕಿನ ಒಟ್ಟು ದ್ರಾಕ್ಷಿ ಪೈಕಿ ಹಸಿ ದ್ರಾಕ್ಷಿ ವಹಿವಾಟು 100 ಕೋಟಿ ರೂ.ನಷ್ಟಿದ್ದರೆ ಒಣ ದ್ರಾಕ್ಷಿ 500 ಕೋಟಿ ರೂ.ವಹಿವಾಟು ಹೊಂದಿದೆ.

ಇಷ್ಟೆಲ್ಲ ಇದ್ದರೂ ಪೂರಕವಾಗಿ ಜಿಲ್ಲೆಯಲ್ಲಿ ಸಂಸ್ಕರಣಾ ಘಟಕ, ಮಾರುಕಟ್ಟೆ ಇಲ್ಲದ್ದರಿಂದ ದ್ರಾಕ್ಷಿ ಬೆಳೆಗಾರರ ಆದಾಯಕ್ಕೆ ದೊಡ್ಡ ಪೆಟ್ಟು ಬಿದ್ದಿದೆ. ಅನಿವಾರ್ಯವಾಗಿ ಗಡಿ ಭಾಗದ ದ್ರಾಕ್ಷಿ ಬೆಳೆಗಾರರು ಮಹಾರಾಷ್ಟ್ರದ ಸಾಂಗ್ಲಿ, ತಾಸಗಾಂವ, ಕೊಲ್ಹಾಪುರ, ಸೊಲ್ಹಾಪುರ ಮಾರುಕಟ್ಟೆಗಳನ್ನು ಅವಲಂಬಿಸಿದ್ದಾರೆ. ಮಹಾರಾಷ್ಟ್ರದ ಮಾರುಕಟ್ಟೆಗಳಲ್ಲಿ ಅಲ್ಲಿನ ಖರೀದಿದಾರರ ಏಕಸ್ವಾಮ್ಯ ನೀತಿಯಿಂದ ಪ್ರತಿ ವರ್ಷ ಅಥಣಿ ತಾಲೂಕಿನ ದ್ರಾಕ್ಷಿ ಬೆಳೆಯ ಆದಾಯಕ್ಕೆ 100 ಕೋಟಿ ರೂ.ಗೂ ಅಧಿಕ ಮೊತ್ತದ ಹಾನಿ ಸಂಭವಿಸುತ್ತಿದೆ.


ಅಥಣಿ ತಾಲೂಕಿನಲ್ಲಿ ದ್ರಾಕ್ಷಿ ಬೆಳೆ.

ದ್ರಾಕ್ಷಿ ಇಲ್ಲಿಯದು, ಲೇಬಲ್ ಆಲ್ಲಿಯದು: ಬಹುತೇಕ ದ್ರಾಕ್ಷಿ ಬೆಳೆಗಾರರ ಜತೆಗೆ ದೂರವಾಣಿಯಲ್ಲೇ ವಹಿವಾಟು ನಡೆಸುವ ಮಹಾರಾಷ್ಟ್ರದ ವ್ಯಾಪಾರಸ್ಥರು ಮತ್ತು ಮಧ್ಯವರ್ತಿಗಳು ಮಾರುಕಟ್ಟೆ ದರಕ್ಕಿಂತಲೂ ಕಡಿಮೆಗೆ ಖರೀದಿಸಿ ಹೆಚ್ಚು ಬೆಲೆಗೆ ಮಾರಾಟ ಮಾಡುವುದು ಸಾಮಾನ್ಯ ಎಂಬಂತಾಗಿದೆ. ಆಲ್ಲದೆ, ಕರ್ನಾಟಕದ ದ್ರಾಕ್ಷಿಗೆ ಮಹಾರಾಷ್ಟ್ರದ ಕಂಪನಿಗಳು ಲೇಬಲ್ ಅಂಟಿಸಿ ದೇಶ-ವಿದೇಶಗಳಿಗೆ ರಫ್ತು ಮಾಡುತ್ತಿವೆ. ಇದು ಗಡಿ ಭಾಗದ ರೈತರ ಆದಾಯಕ್ಕೆ ದೊಡ್ಡ ಪೆಟ್ಟಾದರೆ ಕರ್ನಾಟಕದ ದ್ರಾಕ್ಷಿ ಬೆಳೆಗಾರರಿಗೆ ಸ್ಥಳೀಯ ಮಾರುಕಟ್ಟೆ ಸೌಕರ್ಯ ಸಿಗದಂತಾಗಿದೆ. ಅಥಣಿ ತಾಲೂಕಿನಲ್ಲಿ ಹೊಸದಾಗಿ ಸ್ಥಾಪನೆಯಾಗಿರುವ ದ್ರಾಕ್ಷಿ ಸಂಸ್ಕರಣಾ ಘಟಕದಿಂದ ನೇರವಾಗಿ 2019ರಲ್ಲಿ ದುಬೈಗೆ ಒಣ ದ್ರಾಕ್ಷಿ ರಫ್ತು ಮಾಡಿರುವ ದಾಖಲೆ ಇರುವುದರಿಂದ ಸ್ಥಳೀಯವಾಗಿ ಮೂಲಸೌಲಭ್ಯ ಕಲ್ಪಿಸಬೇಕು ಎನ್ನುವುದು ಸ್ಥಳೀಯ ಬೆಳೆಗಾರರ ಒತ್ತಾಯ.

ಇಲ್ಲೇಕೆ ಸಾಧ್ಯವಿಲ್ಲ?: ವಿಜಯಪುರದಲ್ಲಿ ಈಚೆಗೆ ಆನ್‌ಲೈನ್ ಟ್ರೇಡಿಂಗ್ ಆರಂಭಿಸಿದ್ದು ಆ ಜಿಲ್ಲೆಯ ರೈತರಿಗೆ ಅನುಕೂಲವಾಗುತ್ತಿದೆ. ಆದೇ ಮಾದರಿಯಲ್ಲಿ ಬೆಳಗಾವಿ ಜಿಲ್ಲೆಯಲ್ಲೂ ಸುಸಜ್ಜಿತ ಮಾರುಕಟ್ಟೆ ಸ್ಥಾಪನೆ ಆಗಬೇಕಿದೆ. 'ಆತ್ಮನಿರ್ಭರ ಭಾರತ' ಮಂತ್ರ ಜಪಿಸುತ್ತಿರುವ ಕರ್ನಾಟಕ ಸರಕಾರ ಕೋಲ್ಡ್ ಸ್ಟೋರೇಜ್ ಮತ್ತು ಮಾರುಕಟ್ಟೆಗಾಗಿ ಒಂದು ಸಲ 100 ಕೋಟಿ ರೂ. ಆನುದಾನ ಏನಿಯೋಗಿಸಿದರೆ ಅಥಣಿ ತಾಲೂಕಿನ ರೈತರಿಗೆ ಪ್ರತಿ ವರ್ಷ ಆಗುತ್ತಿರುವ 100 ಕೋಟಿ ರೂ. ಹಾನಿ ತಪ್ಪುತ್ತದೆ. ದ್ರಾಕ್ಷಿ ಬೆಳೆಗಾರರನ್ನು ಇನ್ನಷ್ಟು ಪ್ರೋತ್ಸಾಹಿಸಿದಂತೆಯೂ ಆಗುತ್ತದೆ. ಜತೆಗೆ ಬೆಳೆಗಾರರ ಹಾನಿ, ಶ್ರಮ, ಸಮಯವನ್ನೂ ಉಳಿಸಬಹುದು ಎನ್ನುವುದು ರೈತರ ಒತ್ತಾಯ.

■ ದ್ರಾಕ್ಷಿ ಬೆಳೆಗಾರರ ಸಮಸ್ಯೆ ವಿಷಯವಾಗಿ ರೈತರೆಲ್ಲರೂ ಸೇರಿ ಮುಂದಿನ ಹೋರಾಟದ ವಿಷಯವಾಗಿ ಒಂದು ಸುತ್ತಿನ ಚರ್ಚೆ ನಡೆಸಿದ್ದೇವೆ. ಸರಕಾರ ಬರುವ ಬಜೆಟ್‌ನಲ್ಲಿಯೇ ಅನುದಾನ ಮೀಸಲಿಟ್ಟು ಅನುಕೂಲ ಮಾಡಿಕೊಡಬೇಕು. ಇಲ್ಲದಿದ್ದರೆ ಹೋರಾಟ ಎದುರಿಸಬೇಕು.

-ಬಿ.ಎ.ಚವ್ಹಾಣ ಅಧ್ಯಕ್ಷರು, ಅಥಣಿ ತಾಲೂಕು ದ್ರಾಕ್ಷಿ ಸಂಸ್ಕರಣಾ ಘಟಕಗಳ ಒಕ್ಕೂಟ

12-02-2021 Vk Pg 09

UASB LIBRARY
Newspaper Clippings
Pg .3 Friday 12-02-2021 Jai Kisan



ನಾಲ್ಕು ದಿನಗಳಲ್ಲಿ 50 ಸಾವಿರಕ್ಕೂ ಹೆಚ್ಚು ಮಂದಿ ಭೇಟಿ | ರೈತರು, ವಿಜ್ಞಾನಿಗಳ ಸಮಾಗಮ

ರಾಷ್ಟ್ರೀಯ ತೋಟಗಾರಿಕಾ ಮೇಳಕ್ಕೆ ಇಂದು ತೆರೆ



ಮೇಳದಲ್ಲಿ ಯುವತಿಯರು, ಮಕ್ಕಳ ಸೆಲ್ಫಿ ಸಂಭ್ರಮ.

■ ವಿಕ ಸುದ್ದಿಲೋಕ ಬೆಂಗಳೂರು

ತೋಟಗಾರಿಕಾ ಮೇಳಕ್ಕೆ ಕಳೆದ ನಾಲ್ಕು ದಿನಗಳಲ್ಲಿ ಬರೋಬ್ಬರಿ 50 ಸಾವಿರಕ್ಕೂ ಹೆಚ್ಚು ಮಂದಿ ಭೇಟಿ ನೀಡಿದ್ದಾರೆ. ಗುರುವಾರ ಕೂಡ 18 ಸಾವಿರಕ್ಕೂ ಹೆಚ್ಚು ಮಂದಿ ಆಗಮಿಸಿದ್ದರು. ಕೊನೆಯ ದಿನವಾದ ಶುಕ್ರವಾರ ಅಧಿಕ ಸಂಖ್ಯೆಯಲ್ಲಿ ರೈತರು, ಆಸಕ್ತರು ಭೇಟಿ ನೀಡುವ ಸಾಧ್ಯತೆಯಿದೆ.

ಕೋವಿಡ್ ಹಿನ್ನೆಲೆಯಲ್ಲಿ ಈ ಬಾರಿ ವರ್ಚುಯಲ್ ಮೇಳವನ್ನು ಆಯೋಜಿಸಲಾಗಿದೆ. ಮೊದಲ ಬಾರಿಗೆ ಅನ್‌ಲೈನ್ ಮತ್ತು ಆಫ್‌ಲೈನ್ ಮೂಲಕ ಮೇಳ ನಡೆಯುತ್ತಿದೆ. ಈಗಾಗಲೇ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಐವತ್ತು ಸಾವಿರಕ್ಕೂ ಹೆಚ್ಚು ರೈತರು ಭಾಗವಹಿಸಿದ್ದಾರೆ.

ಕೊರೊನಾ ಹಿನ್ನೆಲೆಯಲ್ಲಿ ಐಐಎಚ್ ಆರ್ ಸ್ಥಳೀಯ ರೈತರ ಭೇಟಿಗೆ ಮಾತ್ರ ಅವಕಾಶ ಕಲ್ಪಿಸಿತ್ತು. ಹೊರರಾಜ್ಯಗಳ ರೈತರಿಗೆ ಆನ್‌ಲೈನ್ ಮೂಲಕ ಮೇಳದ ವೀಕ್ಷಣೆಗೆ ಅನುವು ಮಾಡಿಕೊಡಲಾಗಿತ್ತು. ಆದರೂ, ನೆರೆ ರಾಜ್ಯಗಳಿಂದ ಕೃಷಿಕರು, ತೋಟಗಾರಿಕಾ ಉತ್ಪನ್ನಗಳ ಉದ್ದಿಮೆದಾರರು ಮೇಳಕ್ಕೆ ಖುದ್ದು ಭೇಟಿ ಕೊಟ್ಟಿದ್ದರು. ಕೇರಳದಿಂದ ಬಹುಸಂಖ್ಯೆಯಲ್ಲಿ ಕೃಷಿ ಆಸಕ್ತರು ಆಗಮಿಸಿದ್ದು ವಿಶೇಷವಾಗಿತ್ತು.

ಉತ್ತರ ಕರ್ನಾಟಕ ಭಾಗದ ರೈತರು ತೋಟಗಾರಿಕೆ ಬೆಳೆಗಳ ಬಗ್ಗೆ ಹೆಚ್ಚು ಆಕರ್ಷಿತಗೊಂಡು, ಸ್ವೀಶಕ್ತಿ, ಸ್ವಸಹಾಯ ಗುಂಪು, ಕೃಷಿ ಆಧಾರಿತ ಸಸ್ವಹಾಯ ಸಂಘಗಳ ಮೂಲಕ ಭೇಟಿ ಕೊಟ್ಟಿದ್ದರು. ಕೋವಿಡ್ ನಿರ್ಬಂಧದ ನಡುವೆಯೂ ಮೇಳಕ್ಕೆ ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ಮತ್ತು ಮಕ್ಕಳು ಆಗಮಿಸಿದ್ದರು. ರೈತರು ಸಂರಕ್ಷಿತ ಬೇಸಾಯ, ತೋಟಗಾರಿಕೆ ಬೇಸಾಯ ಪದ್ಧತಿಗಳ ಬಗ್ಗೆ ಸಮಗ್ರವಾಗಿ ಮಾಹಿತಿ ಪಡೆದರು.

ಒಂದು ರೀತಿ ಈ ಮೇಳ ವಿಜ್ಞಾನಿಗಳು, ರೈತರು, ಉದಯೋನ್ಮುಖ ಉದ್ದಿಮೆದಾರರು ಒಗ್ಗೂಡುವ ವೇದಿಕೆಯಾಗಿ ಮಾರ್ಪಟ್ಟಿತ್ತು.

ತರಕಾರಿ ಬೊಕ್ಕೆ ಆಕರ್ಷಣೆ



ಗುಲಾಬಿ, ಆರ್ಕಿಡ್, ಗ್ಲಾಡಿಯೋಲಸ್, ಜರ್ಬೇರಾ ಮತ್ತಿತರ ಹೂವುಗಳಿಂದ ಬೊಕ್ಕೆಯನ್ನು ಮಾಡಲಾಗುತ್ತದೆ. ಆದರೆ ಮೇಳದಲ್ಲಿ ತರಕಾರಿಗಳಿಂದ ಬೊಕ್ಕೆಗಳನ್ನು ತಯಾರಿಸಲಾಗಿದೆ. ಕ್ಯಾರೆಟ್, ಬದನೆಕಾಯಿ, ಮೂಲಂಗಿ, ಬೆಂಡೆ ಕಾಯಿ ಮತ್ತಿತರ ತರಕಾರಿಗಳನ್ನು ಇದಕ್ಕೆ ಬಳಸಲಾಗಿದೆ.

ಕೃಷಿಯಲ್ಲಿ ಮಹಿಳೆಯರಿಗೆ ಹೇರಳ ಉದ್ಯೋಗಾವಕಾಶ

■ ವಿಕ ಸುದ್ದಿಲೋಕ ಬೆಂಗಳೂರು

ರಾಷ್ಟ್ರೀಯ ತೋಟಗಾರಿಕೆ ಮೇಳದಲ್ಲಿ ನಾಲ್ಕನೇ ದಿನವಾದ ಗುರುವಾರ ನಡೆದ ತಾಂತ್ರಿಕಗೋಷ್ಠಿಯಲ್ಲಿ ಐಐಎಚ್‌ಆರ್‌ನ ಕಿರಿಯ ಮಹಿಳಾ ವಿಜ್ಞಾನಿಯೊಬ್ಬರಿಗೆ ಗೋಷ್ಠಿಯ ನೇತೃತ್ವ ವಹಿಸುವ ಮೂಲಕ ಅಂತಾರಾಷ್ಟ್ರೀಯ ಮಹಿಳಾ ಮತ್ತು ಹೆಣ್ಣು ಮಕ್ಕಳ ವಿಜ್ಞಾನ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಐಐಎಚ್‌ಆರ್‌ನ ಕಿರಿಯ ಸಂಶೋಧಕಿ (ಹಣ್ಣು ಬೆಳೆ ವಿಭಾಗ) ಡಾ. ಪಿ.ಎಲ್. ಅನುಷ್ಠಾ ತೋಟಗಾರಿಕೆ ಬೆಳೆಗೆ ಸಂಬಂಧಿಸಿದಂತೆ ಹಮ್ಮಿಕೊಂಡಿದ್ದ ತಾಂತ್ರಿಕ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು.



ತಾಂತ್ರಿಕಗೋಷ್ಠಿಯಲ್ಲಿ ಎಂ.ಆರ್. ದಿನೇಶ್, ಡಾ. ಪಿ.ಎಲ್. ಅನುಷ್ಠಾ ಪಾಲ್ಗೊಂಡಿದ್ದರು.

"ತೋಟಗಾರಿಕೆ, ಕೃಷಿ, ಹೈನುಗಾರಿಕೆ, ಮೀನುಗಾರಿಕೆ ಮತ್ತು ಅದಕ್ಕೆ ಸಂಬಂಧಿಸಿದ ಉಪ ಉದ್ಯಮದಲ್ಲಿ ಹೆಣ್ಣು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಹಾಗೆಯೇ, ಕೃಷಿ ಮತ್ತು ತೋಟಗಾರಿಕೆಯಲ್ಲಿ ಪದವಿ ಪಡೆಯುತ್ತಿರುವ ಹೆಣ್ಣು ಮಕ್ಕಳ ಸಂಖ್ಯೆ ಪ್ರತಿ ರಾಜ್ಯದಲ್ಲಿ ಶೇ.35ರಷ್ಟಿದೆ. ಕೇರಳದಲ್ಲಿ ಶೇ.65ಕ್ಕೂ ಹೆಚ್ಚಿನ ಹೆಣ್ಣು ಮಕ್ಕಳು ಕೃಷಿ ಮತ್ತು ತೋಟಗಾರಿಕೆ ವಿಭಾಗದಲ್ಲಿ ಪದವಿ ಕಲಿಯುತ್ತಿದ್ದಾರೆ"ಎಂದು ಅನುಷ್ಠಾ ತಿಳಿಸಿದರು.

ಮಹಿಳಾ ಮತ್ತು ಹೆಣ್ಣು ಮಕ್ಕಳ ವಿಜ್ಞಾನ ದಿನಾಚರಣೆಯಲ್ಲಿ ಕಿರಿಯ ಮಹಿಳಾ ವಿಜ್ಞಾನಿ ಭಾಗಿ

"ತೋಟಗಾರಿಕೆ ಮತ್ತು ಕೃಷಿಯಲ್ಲಿ ಇತ್ತೀಚೆಗೆ ಹೆಚ್ಚಿನ ಉದ್ಯೋಗಾವಕಾಶಗಳು ದೊರಕುತ್ತಿರುವುದೇ ಹೆಚ್ಚಿನ ಹೆಣ್ಣು ಮಕ್ಕಳ ಪ್ರವೇಶಕ್ಕೆ ಕಾರಣ" ಎಂದು ಅವರು ವಿಶ್ಲೇಷಿಸಿದರು.

ರೈತರ ಸಮಸ್ಯೆಗಳಿಗೆ ನೆರವಾದ ಗೋಷ್ಠಿ: ಮೇಘಾಲಯ, ಮಣಿಪುರ, ಮಿಜೋರಾಂ, ನಾಗಾಲ್ಯಾಂಡ್, ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ ಮತ್ತು ಛತ್ತೀಸ್‌ಗಢ ರಾಜ್ಯಗಳ ರೈತರು ಆನ್‌ಲೈನ್‌ನಲ್ಲಿ ನಡೆದ ತಾಂತ್ರಿಕ ಗೋಷ್ಠಿಯಲ್ಲಿ ಪಾಲ್ಗೊಂಡರು. ಈ ವೇಳೆ ಮಾವು ಬೆಳೆಗೆ ಸಂಬಂಧಿಸಿದಂತೆ ವಿಜ್ಞಾನಿಗಳಿಂದ ಮಾಹಿತಿ ನೀಡಲಾಯಿತು.

ನಾಗಾಲ್ಯಾಂಡ್, ಮಿಜೋರಾಂ, ಮೇಘಾಲಯ ಮತ್ತು ಮಣಿಪುರ ರೈತರಿಗೆ ಬಾಳೆ ಗಿಡ ರೋಗ ತಡೆಗಟ್ಟುವ ಸಂಬಂಧ ವಿಜ್ಞಾನಿಗಳು ಮಾಹಿತಿ ನೀಡಿದರು. ಬಾಳೆಗಿಡವನ್ನು ಕಾಡುವ ಸಿಗೋಟಕ ರೋಗ ತಡೆಗಟ್ಟುವುದು ಹೇಗೆ ಎನ್ನುವ ಕುರಿತು ರಾಷ್ಟ್ರೀಯ ಸಂಶೋಧನಾ ಕೇಂದ್ರದ ವಿಜ್ಞಾನಿ ಡಾ. ರಾಮಜಯಂ ಈಶಾನ್ಯ ರಾಜ್ಯಗಳ ರೈತರಿಗೆ ಮಾಹಿತಿ ಒದಗಿಸಿದರು. ರೈತರಿಂದ ಮುಂಚಿತವಾಗಿ ಪ್ರಶ್ನೆಗಳನ್ನು ತರಿಸಿಕೊಳ್ಳಲಾಗಿತ್ತು.

ಐಐಎಚ್‌ಆರ್‌ನ ವಿಜ್ಞಾನಿಗಳಾದ ಬಿ. ಬಾಲಕೃಷ್ಣ ಡಾ. ಅನಿಲ್ ಕುಮಾರ್ ನಾಯರ್, ಡಾ. ಅಂಜನಿ ಕುಮಾರ್, ಡಾ. ರಾಜೀವ್ ಕುಮಾರ್ ಗೋಷ್ಠಿ ನಡೆಸಿಕೊಟ್ಟರು.

ಜೇನುತುಪ್ಪದ ಜತೆ ಜೇನು ಪರಾಗದ ಪ್ರದರ್ಶನ

ಹೆಸರಘಟ್ಟದ ತೋಟಗಾರಿಕಾ ಮೇಳದಲ್ಲಿ ನೈಸರ್ಗಿಕ ಜೇನು ತುಪ್ಪದ ಜತೆಗೆ ನೈಸರ್ಗಿಕ ಜೇನಿನ ಪರಾಗ, ರಾಯಲ್ ಜಲ್ಲಿಯೂ ಸಿಗುತ್ತಿದೆ.

40–80 ಜೇನು ಹುಳಗಳುಳ್ಳ ಜೇನು ಕುಟುಂಬದಲ್ಲಿ ತಿಂಗಳಿಗೊಮ್ಮೆ 15 ಗ್ರಾಂ ಪರಾಗ ಸಂಗ್ರಹಿಸಲಾಗುವುದು. ಹೇರಳ ಪೋಷಕಾಂಶಗಳಿರುವ ಪರಾಗ (ಗೋಧಿ ಬಣ್ಣದ ಪುಟಾಣಿ ಕಾಳುಗಳ ಮಾದರಿ)ವನ್ನು ಉತ್ತರ ಕನ್ನಡದ ಮಧುಕೇಶ್ವರ ಜೆ. ಹೆಗಡೆಯವರ ಮಧು ಬೀ ನರ್ಸರಿ ಮಳಿಗೆಯಲ್ಲಿ ಪ್ರದರ್ಶಿಸಲಾಗಿದೆ. ಬಹುತೇಕರು ಪರಾಗದ ಬಗ್ಗೆ ಆಸಕ್ತಿಯಿಂದ ಮಾಹಿತಿ ಪಡೆಯುತ್ತಿದ್ದರು. ಅದರ ಉಪಯೋಗಗಳ ಬಗೆಗೂ ಮಳಿಗೆಯ ಮಾಲೀಕರಿಂದ ವಿವರಗಳನ್ನು ಪಡೆಯುತ್ತಿದ್ದುದು ವಿಶೇಷವಾಗಿ ಕಂಡು ಬಂತು.

ಬಗೆ ಬಗೆಯ ಜೇನುಗಳು: ಜೇನುತುಪ್ಪದಲ್ಲಿ ತಯಾರಿಸಿದ ಜಾಮ್, ಬ್ರಾಹ್ಮಿ–ನೆಲನೆಲ್ಲಿ ಮಿಶ್ರಿತ ಜೇನುತುಪ್ಪ, ಕೋಕಂ ಸಿರಪ್‌ನ ಜೇನುತುಪ್ಪ, ಅಂಟುವಾಳ ಕಾಯಿಯ ಜೇನುತುಪ್ಪ, ನೇರಳೆ ಹೂವಿನ ಜೇನು, ಸಿಹಿ ಜೇನು, ಉಪ್ಪಿನ ಜೇನುತುಪ್ಪ ಇತ್ಯಾದಿಗಳಿವೆ.



ಡೈಫ್ರೂಟ್ಸ್, ನೆಲ್ಲಿ, ಜೇನುತುಪ್ಪ ಮಿಶ್ರಿತ ಆಮ್ಲಾ ಶ್ವಗಂಧ ಲೇಹ್ಯ ಎಲ್ಲಾ ವರ್ಗದವರನ್ನು ಸೆಳೆಯುತ್ತಿದೆ. ಇವು ಶುಗರ್, ಕ್ಯಾನ್ಸರ್ ಇತ್ಯಾದಿಗಳ ನಿಯಂತ್ರಣಕ್ಕೆ ಸಹಕಾರಿಯಾಗಿವೆ. ರಾಣಿ ಕಣಗಳ ರಚನೆ ಸಂದರ್ಭದಲ್ಲಿ ಸಂಗ್ರಹಿಸಿಡುವ ದುಬಾರಿ ರಾಯಲ್ ಜಲ್ಲಿಯನ್ನು ಕೂಡ ನೋಡಬಹುದು.

ತರಕಾರಿಗಳಲ್ಲಿ ಕೊರೊನಾ ವಾರಿಯರ್ಸ್



ಕೋವಿಡ್ ಹಿನ್ನೆಲೆಯಲ್ಲಿ ಹಗಲಿರುಳು ದುಡಿಯುತ್ತಿರುವ ವೈದ್ಯರು, ನರ್ಸ್‌ಗಳು, ಆಶಾ ಕಾರ್ಯಕರ್ತೆಯರು, ಪೊಲೀಸರ ಪಾತ್ರ ಶ್ಲಾಘನೀಯವಾದುದು. ರಾಷ್ಟ್ರೀಯ ತೋಟಗಾರಿಕೆ ಮೇಳದಲ್ಲಿ ಮಾಸ್ಕ್ ಧರಿಸಿದ ಪೊಲೀಸ್, ಡಾಕ್ಟರ್, ಹೌಸ್‌ಕೀಪಿಂಗ್ ಮತ್ತಿತರ ಸೇವೆಯಲ್ಲಿ ತೊಡಗಿರುವವರ ಪ್ರತಿಕೃತಿಗಳನ್ನು ಕತ್ತರಿಸಿದ ತರಕಾರಿಗಳಿಂದ ನಿರ್ಮಿಸಲಾಗಿದೆ. ಇದು ನೋಡುಗರ ಗಮನ ಸೆಳೆಯುತ್ತಿದೆ.

ಗಾಂಧಿ ವೇಷಧಾರಿ

ನಗರದಲ್ಲಿ ಯಾವುದೇ ಮೇಳಗಳಿರಲಿ, ಗಾಂಧಿ ವೇಷಧಾರಿಯೊಬ್ಬರು ನೋಡುಗರ ಗಮನ ಸೆಳೆಯುತ್ತಾರೆ. ಅದೇ ರೀತಿ ತೋಟಗಾರಿಕೆ ಮೇಳದಲ್ಲೂ ಈ ಗಾಂಧಿ ವೇಷಧಾರಿ ಆಗಮಿಸಿದ್ದು, ಒಂದೆಡೆ ಪ್ರತಿಮೆಯಂತೆ ನಿಂತು ಎಲ್ಲರ ಗಮನ ಸೆಳೆಯುತ್ತಿದ್ದರು. ಕೆಲವರು ಅವರ ಶ್ರದ್ಧೆಗೆ ಮೆಚ್ಚಿಗೆ ಕಾಣಿಕೆ ನೀಡುತ್ತಿದ್ದರು. ಮತ್ತೆ ಕೆಲವರು ಸೆಲ್ಫಿ/ಫೋಟೊ ತೆಗೆದುಕೊಳ್ಳುತ್ತಿದ್ದರು.

06-02-2021 Vk Pg 12

SIZE MATTERS

IIHR scientists' petite pumpkin boon for city folk

NIRANJAN KAGGERE
BENGALURU, DHNS

Rich in anti-oxidants and a cheap source of vitamins and minerals, pumpkins have always been in great demand. But its large size puts urban residents in a fix as they would end up consuming the national vegetable of India for days on end.

Now, coming to their aid and to encourage more people to grow and consume pumpkins, scientists at the Indian Institute of Horticultural Research (IIHR) at Hessaraghatta in Bengaluru have come up with a table-top variety of the vegetable. Unlike the regular creeper variety, the new variety, temporarily named SQGL-2-5, can easily be grown in pots on balconies and on terrace gardens, according to scientists.



The new table-top pumpkin variety, suitable for urban use.

Dr Rajashankar, scientist and breeder of the new variety, told *DH* that this bushy variety is a 90-day crop. "One fruit weighs about 500 to 600 gms and each plant is capable of producing at least 10 pumpkins. The colour of the flesh varies from orange to deep orange as it is loaded with beta carotene. Commercially also, if you invest Rs 1, this national vegetable will yield Rs 7," Dr Rajashankar said.

The variety is rich in nutrients and has slightly lower sugar content, making it healthier for diabetics. "More than commercial use, we want urban people to take up cultivation of this variety as it can easily be grown in a single pot all through the year and can be harvested any time," he said. The variety was a star attraction at the National Horticulture Festival-2021.

06-02-2021 Dec Hrd Pg 01